ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಜನರ ಪರವಾಗಿ ವಕಾಲತ್ತು ಮಾಡುವುದಕ್ಕಾಗಿಯೇ ನಾವು ಮತ್ತು ನೀವು ಇಲ್ಲಿಗೆ ಬಂದಿರುವುದು.

ಶ್ರೀ ಆರ್. ಎಲ್. ಜಾಲಪ್ಪ.—ಈ ಬಗ್ಗೆ ನಮಗೆ ಕೇಂದ್ರ ಸರ್ಕಾರದಿಂದ ಕೆಲವೊಂದು ಸೂಚನೆಗಳು ಬಂದಿವೆ. ಇಂತಹ ಘಟನೆಗಳನ್ನು ಸಾಧ್ಯವಾದಷ್ಟೂ ಮಟ್ಟಿಗೆ ಮೊಳಕೆಯಲ್ಲಿ ಚಿವುಟಿ ಹಾಕಬೇಕು ಮತ್ತು ಇವು ನಡೆಯದಂತೆ ನೋಡಿಕೊಳ್ಳಬೇಕು ಎಂದು ನಮಗೆ ಕೇಂದ್ರದವರು ತಿಳಿಸಿದ್ದಾರೆ. ಆದ್ದರಿಂದ ನಾವು ಈ ಬಗ್ಗೆ ಬೇಕಾದಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ರಾಷ್ಟ್ರದ ಹಿತ ದೃಷ್ಟಿಯಿಂದ ಇಂತಹ ಒಂದು ಅಸಂಗತಿಗಳಿಗೆ ಅವಕಾಶ ಕೊಡಬಾರದು ಎಂಬುದು ನಮಗೂ ಗೊತ್ತಿದೆ. ಈ ಕಾರಣದಿಂದ ಹಿರಿಯ ಸಿ. ಒ. ಡಿ. ಅಧಿಕಾರಿ ಒಬ್ಬರನ್ನು ಅಲ್ಲಿಯ ಪರಿಸ್ಥಿತಿಯನ್ನು ತಿಳಿದುಕೊಂಡು ಬರುವ ಸಲುವಾಗಿ ಕಳುಹಿಸಿಕೊಟ್ಟಿದ್ದೇನೆ ಈ ಅಧಿವೇಶನ ಮುಗಿದ ಕೂಡಲೇ ನಾನು ಸಹ ಅಲ್ಲಿಗೆ ಹೋಗಿ ಬರುತ್ತೇನೆ. ಈ ಬಗ್ಗೆ ಮಾನ್ಯ ಧರ್ಮಸಿಂಗ್ ಅವರಿಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ನನಗೂ ಸಹ ಇದೆ. ಮತ್ತೆ ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ನನ್ನ ಪರಿಸ್ಥಿತಿ ಪ್ರಥಮ ಚುಂಬನದಂಥ ಭಗ್ನೆ ಎಂಬಂತೆ ಆಗಿದೆ ಎಂದು ಮಾನ್ಯ ಶ್ರೀನಿವಾಸ್ ಅವರು ಹೇಳಿದರು. ಆದರೆ ಈ ಇಲಾಖೆಯಲ್ಲಿ ಇಂತಹ ಚುಂಬನದ ಪ್ರಕರಣಗಳು ಇದ್ದೇ ಇರುತ್ತವೆ.

ಶ್ರೀ ಧರ್ಮಸಿಂಗ್.—ನೀವು ಮೊದಲು ಆರಾಮವಾಗಿದ್ದಿರಿ. ಆದರೆ ಮುಖ್ಯ ಮಂತ್ರಿಗಳು ನಿಮ್ಮ ಮೊದಲಿನ ಖಾತೆಯನ್ನು ಬದಲಾಯಿಸಿ ಮಾಡಿ ಈ ಖಾತೆಯನ್ನು ಕೊಟ್ಟರು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಇಲಾಖೆ ಬೇಡ ಎಂದು ಹೇಳುವಂತಹ ಪರಿಸ್ಥಿತಿ ಈಗ ನಿಮಗೆ ಬಂದಿದೆ. ತೆನಾಲಿ ರಾಮಂಕೃಷ್ಣ ಸಾಕಿದ ಬೆಕ್ಕಿಗೆ ಬಂದ ಪರಿಸ್ಥಿತಿಯೇ ನಿಮಗೂ ಬಂದಿದೆ ಎಂದು ಕಾಣುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಆ ರೀತಿ ಏನೂ ಆಗಿಲ್ಲ. ಈ ಇಲಾಖೆಯ ಬಗ್ಗೆಯೂ ನನಗೆ ಅಭಿಮಾನವಿದೆ. There is some thrill. It is an adventurous job. Therefore, I like this portfolio. ಆದ್ದರಿಂದ ನನ್ನ ಕೈಲಾದ ಮಟ್ಟಿಗೆ ಕೆಲಸ ಮಾಡುತ್ತೇನೆಂಬ ಭರವಸೆಯನ್ನು ತಮಗೆ ಕೊಡುತ್ತೇನೆ.

ಅಧ್ಯಕ್ಷರು.—ಈ ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ನಾನು ಎರಡು ಕಡೆಯ ವಾದವನ್ನು ಕೇಳಿದ ಮೇಲೆ ಇದಕ್ಕೆ ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ.

ಪ್ರಕಟಣೆ

ಅಧ್ಯಕ್ಷರು.—ವಿಧಾನಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿವೆ.—

೧) 'ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ ೧೧ಳರ ಮೇರೆಗೆ, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾದ ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಲಾಯಿತೆಂದು ತಿಳಿಸುತ್ತೇನೆ.

೧. ೧೯೮೭ನೆಯ ಇಸವಿಯ ಕರ್ನಾಟಕ ಮನೋರಂಜನಾ ತೆರಿಗೆಗಳು (ನಾಲ್ಕನೇ ತಿದ್ದುಪಡಿ) ವಿಧೇಯಕ,

೨. ೧೯೮೭ನೆಯ ಇಸವಿಯ ಕರ್ನಾಟಕ ಮೋಟಾರು ವಾಹನಗಳ (ಎರಡನೇ ತಿದ್ದುಪಡಿ) ವಿಧೇಯಕ.''

೨) 'ಶ' ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ ೯೯ರ ಮೇರೆಗೆ, ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾದ ಈ ಕೆಳಕಂಡ ವಿಧೇಯಕವನ್ನು ವಿಧಾನ ಸಭೆಯ ಅನುಮೋದನೆಗಾಗಿ ಕಳುಹಿಸುತ್ತಿದ್ದೇನೆ.—

೧೯೮೭ನೆಯ ಇಸವಿಯ ಕರ್ನಾಟಕ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ,''